ದಿಃ 06-12-2014 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ಮುಂದುವರೆದ ಪಾಟೀ ಸವಾಲು ಶ್ರೀ ಬಿ.ಹೆಚ್. ವಕೀಲರಿಂದಃ

10. ನಿಪಿ-1 ಕ್ರಯ ಪತ್ರ ನೋಡುತ್ತಿದ್ದು ಅದರಡಿ ನಾವು ನಾಲ್ಕು ಜನರು ಸೇರಿಕೊಂಡು ಸರ್ವೆ ನಂಃ 32/P, 01 ಎಕರೆ 20 ಗುಂಟೆ ಜಮೀನನ್ನು ಕ್ರಯಕ್ಕೆ ತೆಗೆದುಕೊಂಡಿರುತ್ತಾರೆ. ಸದರಿ ಕ್ರಯ ಪತ್ರದ ಪ್ರಕಾರ ನಾಲ್ಕು ಜನರು 1985-1986 ರಲ್ಲಿ ಮುಖ್ತಿಯಾರ್‌ನಾಮೆಯ ಪ್ರಕಾರ 8-8 ಸೈಟುಗಳನ್ನು ಪ್ರತಿಯೋಬ್ಬರೂ 8-8 ಸೈಟುಗಳನ್ನು ಹಂಚಿಕೊಂಡಿರುತ್ತಾರೆ. ಸದರಿ ಮುಖ್ತಿಯಾರ್‌ನಾಮೆಯನ್ನು ಹಾಜರುಪಡಿಸಿಲ್ಲ. ಸದರಿ ದಾಖಲೆ ನಮ್ಮ ಹತ್ತಿರ ಇದೆ. ಅದನ್ನು ಈ ಪ್ರಕರಣದಲ್ಲಿ ಹಾಜರುಪಡಿಸಲು ತೊಂದರೆ ಇಲ್ಲ. ಆ ಮುಖ್ತಿಯಾರ್‌ನಾಮೆ ನೊಂದಣಿಯಾಗಿರುತ್ತದೆ. ಈ ಪ್ರಕಾರವಾಗಿ ಯಾವುದೇ ತರಹದ ನೊಂದಾಣಿಯಾಗಿರುವ ಮುಖ್ತಿಯಾರ್‌ನಾಮೆ ಇಲ್ಲದೇ ಇರುವುದರಿಂದ ಅದನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಅಂದರೆ ಸುಳ್ಳು. ಕಾನೂನಿನ ಪ್ರಕಾರ ಮುಖ್ತಿಯಾರ್‌ನಾಮೆಯ ಪ್ರಕಾರ ಆಸ್ತಿಯನ್ನು ಹಂಚಿಕೊಳ್ಳಲು ಬರುವುದಿಲ್ಲ ಅಂದರೆ ಸುಳ್ಳು. ಸದರಿ ದಾಖಲೆಯಡಿ ಮೇಲೆ ಹೇಳಿದ ನಾಲ್ಕೂ ಜನರು ಆಸ್ತಿಯನ್ನು ಹಂಚಿಕೊಂಡ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-1 ರ ಮೂಲ ದಾಖಲೆ ಯಾರ ಹತ್ತಿರ ಇದೆ ಗೊತ್ತಿಲ್ಲ. ಅದರ ಮೂಲ ದಾಖಲೆ ಯಾರ ಹತ್ತಿರ ಇದೆ ಎಂಬುದರ ಕುರಿತು ನನ್ನ ತಂದೆಯಾದ ಶಿವರಾಜ್ ಈತನನ್ನು ವಿಚಾರಿಸಿರುತ್ತೇನೆ. ಅದು ತುಂಬಾ ಹಳೆಯ ದಾಖಲೆ ಇರುವುದರಿಂದ ಅದರ ಅಸಲು ದಾಖಲೆ ಯಾರ ಹತ್ತಿರ ಇದೆ ಎಂಬುದು ನೆನಪಿರುವುದಿಲ್ಲ ಎಂದು ಹೇಳಿರುತ್ತಾರೆ. ಉಳಿದ ಮೂರು ಜನರ ಪೈಕಿ ಒಬ್ಬ ತೀರಿಕೊಂಡಿದ್ದು, ಇನ್ನೋಬ್ಬ ಗಂಟಲು ನೋವಿನಿಂದ ಬಳಲುತ್ತಿರುವುದರಿಂದ ಆತನಿಗೆ ಸರಿಯಾಗಿ ಮಾತನಾಡಲು ಬರುವುದಿಲ್ಲ, ಉಳಿದ ಒಬ್ಬನನ್ನು ವಿಚಾರಿಸಿದಾಗ ಆತ ಯಾರ ಹತ್ತಿರ ಇದೆ ಎಂಬುದು ಇದೆ ಎಂದು ಗೊತ್ತಿಲ್ಲ ಎಂದು ಹೇಳಿರುತ್ತಾನೆ. ನಿಪಿ-1 ರ ಪ್ರಕಾರ ಕ್ರಯ ಪತ್ರವನ್ನು ಬರೆದು ಕೊಡದೇ ಇದ್ದರೂ ಸಹ ನಿಪಿ-1 ನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

11. ನಿಪಿ-2 ರಿಂದ ನಿಪಿ-4 ಈ ದಾಖಲೆಗಳನ್ನೂ ಸಹ ನಿಪಿ-1 ರಲ್ಲಿ ಹೇಳಿರುವ ನಾಲ್ಕೂ ಜನರು ಸೇರಿಕೊಂಡು ಸೃಷ್ಟಿಸಿಕೊಂಡಿರುತ್ತಾರೆ ಅಂದರೆ ಸುಳ್ಳು. ನನ್ನ ಮತ್ತು ನಮ್ಮ ತಂದೆಯವರ ನಡುವೆ

ಬಿನ್ನಾಬಿಪ್ರಾಯವಿರುವುದರಿಂದ ಆತ ನನ್ನ ಹೆಸರಿನಲ್ಲಿ ನಿಪಿ-5 ರ ಪ್ರಕಾರ ಕ್ರಯ ಪತ್ರ ಮಾಡಿಕೊಟ್ಟಿರುತ್ತಾನೆ. ನಿಪಿ-5 ನ್ನು ಬರೆದುಕೊಡುವ ಹಕ್ಕು ನನ್ನ ತಂದೆಗೆ ಇಲ್ಲ ಅಂದರೆ ಸುಳ್ಳು. ನನ್ನ ಮತ್ತು ತಂದೆಯ ನಡುವೆ ಬಿನ್ನಾಬಿಪ್ರಾಯ ಉಂಟಾಗಿರುವುದರಿಂದ ನಿಪಿ-5 ನ್ನು ಬರೆದುಕೊಟ್ಟಿರುತ್ತಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಸೇರಿ ನಿಪಿ-5 ನ್ನು ಸೃಷ್ಟಿಸಿಕೊಂಡಿರುತ್ತೇವೆ ಅಂದರೆ ಸುಳ್ಳು. ನಿಪಿ-5 ರ ಪ್ರಕಾರ ಯಾವುದೇ ಸೈಟುಗಳ ಮೇಲೆ ನನಗೆ ಮಾಲ್ಕಿ ಹಕ್ಕು ಬಂದಿಲ್ಲ ಅಂದರೆ ಸುಳ್ಳು. ಐಟಂ ನಂಃ 2 ರಲ್ಲಿ ವಿವರಿಸಿದ ಆಸ್ತಿಗೆ ಮತ್ತು ನಾನು ಹಾಜರುಪಡಿಸಿದ ನಿಪಿ-1 ರಿಂದ ನಿಪಿ-11 ದಾಖಲೆಗಳಿಗೆ ಯಾವುದೇ ತರಹದ ಸಂಬಂದ ಇಲ್ಲ ಅಂದರೆ ಸುಳ್ಳು.

12. ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಹೇಳಿದ ಪ್ರಕಾರ 1 ಎಕರೆ 20 ಗುಂಟೆಗೆ ಸಂಬಂದಪಟ್ಟಂತೆ ಜೆರಾಕ್ಸ್ ಲೆಔಟ್ ಪ್ಲಾನ್ ಹಾಜರುಪಡಿಸಿದ್ದು ಸುಳ್ಳು ಇರುತ್ತದೆ ಅನ್ನುವುದು ಸರಿಯಲ್ಲ. ಈ ಅರ್ಜಿಯ ಐಟಂ ನಂಃ 2ನೇ ಆಸ್ತಿ 1 ಎಕರೆ 5 ಗುಂಟೆ ಇದು ಕೃಷಿ ಭೂಮಿ ಇದ್ದರೂ ಸಹ ಕೃಷಿಯೇತರ ಭೂಮಿ ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ 1 ಎಕರೆ 5 ಗುಂಟೆ ಜಮೀನನ್ನು ಅರ್ಜಿದಾರಳು ಆದೇಶದ ಪ್ರಕಾರ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿರುತ್ತಾರೆಂದರೆ ಸುಳ್ಳು. ಅದನ್ನು ಸ್ವಾಧೀನ ಪಡೆದುಕೊಂಡ ನಂತರ ಆ ಜಮೀನನ್ನು ಅನುಬವಿಸುತ್ತಿದ್ದಾರೆ ಅಂದರೆ ಸುಳ್ಳು. ಇದಕ್ಕೆ ಸಂಬಂದಪಟ್ಟಂತೆ ನ್ಯಾಯಾಲಯದ ಮುಖಾಂತರ ಜಮೀನನ್ನು ಸರ್ವೆ ಮಾಡಿಸಿಕೊಂಡು ಪೊಲೀಸರ ಸೌರಕ್ಷಣೆಯ ಮುಖಾಂತರ ಡಿಕ್ರಿದಾರಳು ತನ್ನ ಜಮೀನನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಅಂದರೆ ಸುಳ್ಳು. ಐಟಂ ನಂಃ 2ನೇ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು, ಹಿತ ಮತ್ತು ಸಂಬಂದ ಇಲ್ಲ ಅಂದರೆ ಸುಳ್ಳು. ಈಗಿದ್ದರೂ ಸಹ ಸುಳ್ಳು ಮಧ್ಯಂತರ ಅರ್ಜಿ ನಂಃ 5 ನ್ನು ಸಲ್ಲಿಸಿ ದಾವಾ ಸ್ವತ್ತಿನಲ್ಲಿ ನಮ್ಮದು ಈತಾಶಕ್ತಿ ಇದೆ ಎಂದು ಸುಳ್ಳು ಸಾದಿಸುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)**

**ಓ ಹೇ ಕೇ ಸರಿ ಇದೆ,**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಹರಿಹರ.**